Mr SPEKER.—These are all hypothetical. The Hon'ble Minister also said that there was nothing that prevented other schemes being taken up and we are now in 1964 ; 11 years more. Anyway, I do not want the time of the House to be wasted. The Hon'ble Member may put the question again.

ಶ್ರೀ ಟಿ. ಮಾದಯ್ಯಗೌಡ.—5ನೆಯ ಪಂಚವಾರ್ಷಿಕ ಯೋಜನೆಯು 1971ನೇ ಇಸವಿಯಿಂದ 1976ನೇ ಇಸವಿಯವರೆಗೆ ಇದೆ. ಕಾವೇರಿ ನದಿಯ ನೀರಿನ ಒಪ್ಪಂದವು 1974ನೇ ಇಸವಿಗೆ ಮುಕ್ತಾಯವಾಗುತ್ತದೆ. ಅಷ್ಟರೊಳಗಾಗಿ ನಾವು ಕಾವೇರಿ ನದಿಯಲ್ಲಿ ನಮಗೆ ಬರಬೇಕಾದ ನೀರಿನ ಪಾಲನ್ನು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಆ ಅವಧಿಯೊಳಗಾಗಿ ಆ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ಯೋಜನೆಗಳನ್ನು 5ನೆಯ ಪಂಚವಾರ್ಷಿಕ ಯೋಜನೆಯ ಒಳಗಾಗಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ 18 ಯೋಜನೆಗಳೂ 1974ನೇ ಇಸವಿಯ ವೇಳೆಗೇ ಮುಗಿಯಬೇಕೆಂದೇನೂ ಇಲ್ಲ. ನಾವು ಆ ಯೋಜನೆಗಳ ಕೆಲಸಗಳನ್ನು ಪ್ರಾರಂಭ ಮಾಡಿದಮೇಲೆ ಅಲ್ಲಗೆ ನಾವು ಆ ನೀರನ್ನು ಬುಕ್ ಮಾಡಿದಂತಾಗುತ್ತದೆ. ಅನಂತರ ಯೋಜನೆಗಳ ಕೆಲಸ ಮುಗಿದಹಾಗೆ ನಾವು ಎಷ್ಟು ನೀರನ್ನು ಬುಕ್ ಮಾಡಿರುತ್ತೇವೆಯೋ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ಕಾವೇರಿ ಬೇಸಿನ್‌ನಲ್ಲಿರತಕ್ಕ ಅರ್ಕಾವತಿ ಮೀಡಿಯಂ ಪ್ರಾಜೆಕ್ಟ್‌ನ್ನು ಈ ಲಿಸ್ಟಿನಲ್ಲಿ ಸೇರಿಸಿಲ್ಲ ; ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಈ ಲಿಸ್ಟಿನಲ್ಲಿರತಕ್ಕ 18 ಯೋಜನೆಗಳಲ್ಲಿ ಅರ್ಕಾವತಿಯ ಯೋಜನೆಯೂ ಇದೆ.

ಶ್ರೀ ಟಿ. ಮಾದಯ್ಯಗೌಡ.—ಅದು ಬೇರೆ ಆಯಿತು. ಮಾಗಡಿ ತಾಲ್ಲೂಕಿನಲ್ಲರುವ ಮಂಚಿ ಪ್ರಾಜೆಕ್ಟನ್ನೂ ಈ ಯೋಜನೆಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದರ ಬಗ್ಗೆ ಇನ್‌ವೆಸ್ಟಿಗೇಷನ್ ಆಗಿ ಅದರ ವರದಿ ಸರ್ಕಾರಕ್ಕೆ ಬಂದಿದೆ. ಅದನ್ನು ಇನ್ನೂ ವಿಚಾರ ಮಾಡುತ್ತಿದ್ದೇವೆ. ಈಗ ಅದು ಯಾವ ಸ್ಟೇಜಿನಲ್ಲದೆ ಎನ್ನುವುದನ್ನು ನಾನು ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ಕಾವೇರಿ ನದಿಯ ನೀರನ್ನು ಉಪಯೋಗಿಸಿಕೊಳ್ಳುವ ಸಂಬಂಧದಲ್ಲಿ ಸರ್ಕಾರದವರು ಕೈಗೊಳ್ಳಬೇಕೆಂದು ಉದ್ದೇಶಿಸಿರುವ ಯೋಜನೆಗಳನ್ನು ಜಾಗ್ರತೆ ಪೂರೈಸುವ ಉದ್ದೇಶದಿಂದ ಇದಕ್ಕೇ ಒಂದು ಪ್ರತ್ಯೇಕವಾದ ಎಸ್ಟಾಬ್ಲಿಷ್‌ಮೆಂಟನ್ನು ಓಪನ್ ಮಾಡಿ ಅದಕ್ಕೆ ಒಬ್ಬರು ಚೀಫ್ ಇಂಜಿನಿಯರನ್ನು ನೇಮಿಸಿ 1972ನೇ ಇಸವಿಗೆ ಈ ಯೋಜನೆಗಳನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಆಶ್ವಾಸನೆಯನ್ನು ಕೊಡುವುದಕ್ಕಾಗುವುದಿಲ್ಲ. 1974ನೇ ಇಸವಿಯವರೆಗೂ ನಮಗೆ ಕಾಲಾವಕಾಶವಿರುವುದರಿಂದ, ಆ ಅವಧಿಯೊಳಗಾಗಿ ನಾವು ಈ ಯೋಜನೆಗಳ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

Compensation to land-owners who have lost their lands on account of right and left bank channels of Bhadra Reservoir.

*Q.—154. Sri T. D. DEVENDRAPPA (Bhadravathi).—

Will the Government be pleased to state :—

(*a*) whether compensation has been paid to the land-owners of Bhadravathi Taluk who have lost their lands on account of right and left bank channels and also the distributaries of Bhadra Reservoir ;

(*b*) if so, the number and names of villages of Bhadravathi Taluk to which the said land-owners belong ;

(SRI T. D. DEVENDRAPPA)

(*c*) the number of persons of the said Taluk to whom compensation has not yet been paid and the extent of land lost by each one of them ;

(*d*) the action they propose to take in respect of cases wherein no compensation has been paid even though eight years have elapsed since the acquisition of lands for the construction of the said channels and distributaries ?

A.—Sri M. V. KRISHNAPPA (Minister for Revenue).—

(*a*) Compensation has been paid in most of the cases.

(*b*) *Vide* Statement 'A' placed on the table of the House. Placed in the Legislature Library *Vide* No. 3/16-3-1964.

(*c*) *Vide* Statements 'B' and 'C' placed on the table of the House. [Placed in the Legislature Library *Vide* No. 3/16-3-1964.]

(*d*) The concerned officers will be instructed to finalise the acquisition cases early.

ಶ್ರೀ ಟಿ. ಡಿ. ದೇವೇಂದ್ರಪ್ಪ.—ತಮ್ಮ ಉತ್ತರದಲ್ಲಿ ಅನೇಕ ಪ್ರಕರಣಗಳಿಗೆ ಪರಿಹಾರವನ್ನು ಕೊಡಲಾಗಿದೆ ಎಂದು ಹೇಳಿದ್ದೀರಿ, ಆ ಪ್ರದೇಶದಲ್ಲಿ ಭೂಮಿಯನ್ನು ಕಳೆದುಕೊಂಡಿರುವ ಅನೇಕ ಜನರಿಗೆ ಈಗ 8 ವರ್ಷಗಳಾಗಿಯೂ ಪರಿಹಾರವನ್ನು ಕೊಡದೆ ಇರುವುದಕ್ಕೆ ಕಾರಣವೇನು ?

†ಶ್ರೀ ಎಂ. ವಿ. ಕೃಷ್ಣಪ್ಪ.—ಈಗಾಗಲೇ ಬಹಳ ಜನಗಳಿಗೆ ಪರಿಹಾರವನ್ನು ಕೊಟ್ಟಿದೆ. ಆ ಪೈಕಿ ಕೆಲವರು ಉಳಿದಿದ್ದಾರೆ. ಹಾಗೆ ಉಳಿದಿರುವವರಲ್ಲಿ ಕಾಂಗ್ರೆಸ್ಸಿನವರೇ ಇದ್ದಾರೆ. ಆದ್ದರಿಂದ ಸಾಧ್ಯವಾದಮಟ್ಟಿಗೆ ಎಲ್ಲರಿಗೂ ಪರಿಹಾರವನ್ನು ಕೊಡುತ್ತಿದ್ದೇವೆ. ಕೆಲವರು ಅಲ್ಪಸ್ವಲ್ಪ ಜಮೀನನ್ನು ಕಳೆದುಕೊಂಡವರು ನಮಗೆ ನಾರೆ ಬಂತಲ್ಲಾ ಎಂದು ಅವರು ಕಾಂಪೆನ್‌ಸೇಷನ್ ಕ್ಲೈಮೇ ಮಾಡುವುದಿಲ್ಲ. ಆದರೂ ನಾವು ಯಾರು ಯಾರಿಗೆ ಆ ಸಂಬಂಧದಲ್ಲಿ ಇನ್ನೂ ಪರಿಹಾರವನ್ನು ಕೊಟ್ಟಿಲ್ಲವೋ ಅಂಥವರಿಗೆ ಆದಷ್ಟು ಬೇಗ ಪರಿಹಾರವನ್ನು ಕೊಡಬೇಕೆಂದು ಆದಕ್ಕೆ ಸಂಬಂಧಪಟ್ಟವರಿಗೆ ತಿಳಿಸಿದ್ದೇವೆ. ಈಗ ಆ ಸಂಬಂಧದಲ್ಲಿ 150 ಮಂದಿ ಪರಿಹಾರವನ್ನು ಕ್ಲೈಮ್ ಮಾಡಿದ್ದಾರೆ, ಆ ಲಿಸ್ಟನ್ನು ಸಹ ಅವರು ನಮಗೆ ಕಳುಹಿಸಿದ್ದಾರೆ. ಆದ್ದರಿಂದ ನಾವು ಅವರಿಗೆ ಆದಷ್ಟು ಜಾಗ್ರತೆ ಪರಿಹಾರವನ್ನು ಕೊಡಿ ಎಂದು ಆದಕ್ಕೆ ಸಂಬಂಧಪಟ್ಟ ಆಫೀಸರಿಗೆ ಬರೆದಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡ.—ಈಗ ಜಮೀನನ್ನು ಅಕ್ವೈರ್ ಮಾಡಿಕೊಳ್ಳುವಾಗ ಜಮೀನನ್ನು ಕಳೆದುಕೊಂಡವರು ನಿರುದ್ಯೋಗಿಗಳಾಗುತ್ತಾರೆ. ಅಂಥವರಿಗೆ ಪರಿಹಾರವನ್ನು ಕೊಡುವುದಕ್ಕೆ ಏನು ಏರ್ಪಾಡು ಮಾಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇರೆಕಡೆ ಎಲ್ಲಾದರೂ ಜಮೀನು ಇದ್ದರೆ ಕೊಡುತ್ತೇವೆ. ಒಂದು ವೇಳೆ ಸರ್ಕಾರದವರು ಅಕ್ವೈರ್ ಮಾಡಿಕೊಂಡ ಜಮೀನಿನ ಮಾಲೀಕ ಪೂರ್ತಿ ಜಮೀನನ್ನು ಕಳೆದುಕೊಂಡಿದ್ದರೆ, ಆ ಏರಿಯಾದಲ್ಲಿ ಎಲ್ಲಾದರೂ ಫ್ಯಾಕ್ಟರಿ ಇದ್ದರೆ ಆ ಫ್ಯಾಕ್ಟರಿಯಲ್ಲಿ ಅವನಿಗೆ ಕೆಲಸವನ್ನು ಕೊಡಿ ಎಂದು ಬರೆಯುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈಗ ಸರ್ಕಾರದವರು ಅಕ್ವೈರ್ ಮಾಡಿಕೊಂಡಿರತಕ್ಕ ಜಮೀನಿನಿಂದ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಅವನಿಗೆ ಕಾಂಪೆನ್‌ಸೇಷನ್ ಅನ್ನೂ ಕೊಟ್ಟಿಲ್ಲ. ಇದು ಯಾವ ನ್ಯಾಯ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅನೇಕ ರೈತರು ನಮಗೆ ನಾರೆ ಬಂದರೆ ಸಾಕು ಎಂದು ಅವರೆ ವಾರೆಂಟಿಯರ್ ಆಗಿ ಭೂಮಿಯನ್ನು ಬಿಟ್ಟುಕೊಡುತ್ತಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನಮ್ಮಲ್ಲಿಯೂ ಬಿಟ್ಟುಕೊಡುತ್ತಾ ಇದ್ದಾರೆ. ಈಗ ಯಾರೋ ಒಬ್ಬ ರೈತನ ಜಮೀನು ಒಂದು ಕಡೆ 10 ಎಕರೆ ಇರುತ್ತದೆ. ಆ ಹತ್ತು ಎಕರೆಯು ಪೈಕಿ ಎರಡು ಎಕರೆಯಲ್ಲಿ ಚಾನರ್ ಬಂದಿರುತ್ತದೆ. ಅಂಥಾ ಸಂದರ್ಭದಲ್ಲಿ 10 ಎಕರೆಗೂ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಇದು ಯಾವ ನ್ಯಾಯ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಮಧ್ಯೇ ಕಾಂಪೆನ್‌ಸೇಷನ್ ಕೊಡುವುದು ತೀರ್ಮಾನ ಆಗುವವರೆಗೆ ಅವರು ಕ್ಯಾಪ್ ಕಾಂಪೆನ್‌ಸೇಷನ್ ಕ್ಲೈಮ್ ಮಾಡಿದರೆ ಸರ್ಕಾರದವರು ಅದನ್ನು ಕೊಡುವುದಕ್ಕೆ ಸಿದ್ಧರಾಗಿರುವಾಗ ಅವರು ಕಂದಾಯವನ್ನು ಕೊಡಬೇಕಾಗುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಆ ಸ್ಥಳದಲ್ಲಿ ಸರ್ವೆ ಮಾಡತಕ್ಕ ಅಧಿಕಾರಿಗಳನ್ನೂ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯ ಅಧಿಕಾರಿಗಳನ್ನೂ ಮತ್ತು ಅಕ್ವಿಜಿಷನ್ ಅವಾರ್ಡ್ ಬರೆಯತಕ್ಕ ಆಫೀಸರನ್ನೂ ಭೂಮಿಯನ್ನು ಕಳೆದುಕೊಂಡಿರತಕ್ಕ ಭೂ ಮಾಲೀಕರು ಹೋಗಿ ನೋಡದೆ ಇರುವುದರಿಂದ ಈ ಅಕ್ವಿಜಿಷನ್ ಸಂಬಂಧದಲ್ಲಿ ತಡವಾಗುತ್ತಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ತಡವಾಗುವುದಕ್ಕೆ ಕಾರಣ, ಜನರಲ್ ಆಗಿ ರೆವಿನ್ಯೂ ರೀ ಸೆಟ್ಲ್‌ಮೆಂಟ್ ಕೆಲಸ ಆಗುತ್ತಾ ಇರುವುದು. ಇನ್ನು ಸ್ವಲ್ಪ ದಿವಸಗಳೊಳಗಾಗಿ ಸರ್ವೆ ರೀ ಸೆಟ್ಲ್‌ಮೆಂಟ್ ಕೆಲಸ ಮುಗಿದುಹೋಗುತ್ತದೆ. ಆನಂತರ ನೂರಾರು ಜನ ಸರ್ವೆಯರುಗಳಿಗೆ ಕೆಲಸ ಇರುವುದಿಲ್ಲ. ಅವರನ್ನು ಈ ಅಕ್ವಿಜಿಷನ್ನಿಗೆ ಸಂಬಂಧಪಟ್ಟ ಕೆಲಸಗಳಿಗೆ ಬಿಡುತ್ತೇವೆ. ಆಗ ಯಾರು ಯಾರಿಗೆ ಕಾಂಪೆನ್‌ಸೇಷನ್ ಕೊಡಬೇಕೆಂಬುದನ್ನು ತೀರ್ಮಾನ ಮಾಡಿ ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Starting of an Agricultural School at Babbur Agricultural Research Station in Hiriyur Taluk.

*Q.—205. Sri V. MASIYAPPA (Hiriyur).—

Will the Government be pleased to state :—

(*a*) whether there was a proposal to start an Agricultural School in Babbur Agricultural Research Station in Hiriyur Taluk ;

(*b*) if so, at what stage the matter stands at present ?

A.—Sri H. C. BORAIAH (Parliamentary Secretary to Minister for Agriculture).—

(*a*) Yes.

(*b*) The proposal is under the consideration of the Government.

ಶ್ರೀ ವಿ. ಮಸಿಯಪ್ಪ.—(*b*)ಗೆ ಉತ್ತರವಾಗಿ ಈ ಸಲಹೆ ಸರ್ಕಾರದವರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ, ಹಿಂದೆ ವ್ಯವಸಾಯ ಶಾಖೆಯ ಮಂತ್ರಿಗಳಾಗಿದ್ದ ಶ್ರೀ ಕೆ. ಎಫ್. ಪಾಟೀಲರು ಮತ್ತು ಈಗಿನ ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿರುವ ಶ್ರೀ ಎಚ್. ಸಿ. ಬೋರಯ್ಯನವರು ಹಿರಿಯೂರು ತಾಲ್ಲೂಕು ಒಬ್ಬೂರು ವ್ಯವಸಾಯ ಸಂಶೋಧನಾ ಕೇಂದ್ರವನ್ನು ಪರೀಕ್ಷೆ ಮಾಡುವುದಕ್ಕೋಸ್ಕರ ಅಲ್ಲಿಗೆ ಬಂದಿದ್ದಾಗ ಅಲ್ಲಿ ಒಂದು ವ್ಯವಸಾಯ ಶಾಲೆಯೊಂದನ್ನು ಮುಂದಿನ ಜೂನ್ ತಿಂಗಳಿನಿಂದ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎಚ್. ಸಿ. ಬೋರಯ್ಯ.—ಆ ಪ್ರದೇಶದ ಜನಗಳು ಒಂದು ರೆಪ್ರೆಜೆಂಟೇಷನ್ ಕೊಡಲು ; ಅಲ್ಲಿ ಒಂದು ವ್ಯವಸಾಯ ಶಾಲೆಯೊಂದನ್ನು ತೆರೆಯೋಣ ಎಂದು ಆಗಿನ ವ್ಯವಸಾಯ ಮಂತ್ರಿಗಳು ಹೇಳಿದ್ದರು.

ಶ್ರೀ ವಿ. ಮಸಿಯಪ್ಪ.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿಯೇ ಅದನ್ನು ತೆರೆಯುತ್ತೇವೆಂದು ಭರವಸೆಯನ್ನು ಕೊಟ್ಟಿದ್ದರು. ಈಗ ಮೂರನೆಯ ಪಂಚವಾರ್ಷಿಕ ಯೋಜನೆ ಬಂದರೂ ಅದನ್ನು ಪ್ರಾರಂಭವಾಗದೆ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿ. ಬೋರಯ್ಯ.—ಈಗ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಾಲ್ಕು ಸ್ಕೂಲುಗಳನ್ನು ಸ್ಥಾಪನೆ ಮಾಡಬೇಕೆಂಬ ಉದ್ದೇಶ ಇದೆ. ಹಿರಿಯೂರಿನ ವಿಷಯವನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಆದರೆ ಎಕಾನಮಿ ಮತ್ತು ರಿಸೋರ್ಸಸ್ ಕಮಿಟಿಯವರು ಅವುಗಳನ್ನು ಸ್ಕೂಲು ಮಾಡುವುದಕ್ಕಿಂತ ಗ್ರಾಮ ಸೇವಕರ ಟ್ರೈನಿಂಗ್ ಸೆಂಟರ್ ಆಗಿ ಏತಕ್ಕೆ ಮಾಡಬಾರದು ಎಂದು ಒಂದು ಅಭಿಪ್ರಾಯ ಕೊಟ್ಟಿದ್ದಾರೆ. ಆದ್ದರಿಂದ ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.